ಪ್ರಮಾಣ ವಚನ ಬೋಧಿಸಿದ ದಿನಾಂಕಃ **28.01.2026.**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎ.ಎನ್.ಎಲ್. ವಕೀಲರಿಂದ**

ನನಗೆ ಈ ಕೇಸಿನಲ್ಲಿ **2010** ರಲ್ಲಿ ಸಮನ್ಸ್ ಬಂದಿರುತ್ತದೆ. ನಾನು ಈ ಕೇಸಿನಲ್ಲಿ ಹಾಜರಾದ ನಂತರ ವಾದಿಯು ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿ ನನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನಿ.ಪಿ.**1**–ವಂಶವೃಕ್ಷದ ಪ್ರಕಾರ ಸುಬ್ಬಣ್ಣನವರಿಗೆ ಒಟ್ಟು ಆರು ಜನ ಮಕ್ಕಳಿದ್ದಾರೆ ಎಂದರೆ ಸರಿ. ನಿ.ಪಿ.**1** ರ ಬಗ್ಗೆ ನನಗೆ **2010** ರಲ್ಲೇ ತಿಳಿದಿತ್ತು ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ಶಾಮಣ್ಣನವರ ಮೊದಲನೇ ಹೆಂಡತಿ ಹಂಸವೇಣಿ ಎಂದರೆ ನಾನು. ಎರಡನೇ ಹೆಂಡತಿ ಮಮತ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ವಿಚಾರ ತಿಳಿದ ನಂತರ ಶಾಮಣ್ಣನವರನ್ನು ಪ್ರಶ್ನೆ ಮಾಡಿದ್ದೀರಾ? ಎಂದರೆ ಇಲ್ಲ. ಸದರಿ ವಂಶವೃಕ್ಷವನ್ನು ಪ್ರಶ್ನಿಸಿ ಏನಾದರೂ ಕೇಸು ಹಾಕಿದ್ದೀರಾ? ಎಂದರೆ ಇಲ್ಲ. ನಿ.ಡಿ.**48**–ವಂಶವೃಕ್ಷವನ್ನು ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಂಶವೃಕ್ಷ ಏನಿದೆ ಅದನ್ನು ಹೇಳಿ ಬರೆಸಿದ್ದೇನೆ ಎಂದು ಹೇಳುತ್ತಾರೆ. ದಿನಾಂಕಃ**12.10.2014** ರಲ್ಲಿ ವಂಶವೃಕ್ಷವನ್ನು ತಯಾರಿಸಲಾಗಿದೆ ಎಂದರೆ ಸರಿ. ನಿ.ಪಿ.**1** ರ ಬಗ್ಗೆ ನನಗೆ **2010** ರಲ್ಲಿ ಗೊತ್ತಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಎರಡನೇ ಹೆಂಡತಿ ಮಮತ ಮತ್ತು ಅವರ ಮಗಳು ಅನುಷಾರನ್ನು ಕೈಬಿಟ್ಟು ನಿ.ಡಿ.**48**–ವಂಶವೃಕ್ಷವನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ನಾನು **2011** ರಲ್ಲಿ ಸಲ್ಲಿಸಿದ ಲಿಖಿತ ಹೇಳಿಕೆಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ರಾಮಾಂಜಿನಪ್ಪನಿಗೆ ನಾಗರತ್ನಮ್ಮ ಎಂಬ ಮೊದಲನೇ ಹೆಂಡತಿ ಹಾಗೂ ಮುನಿತಾಯಮ್ಮ ಎಂಬ ಎರಡನೇ ಹೆಂಡತಿ ಇದ್ದಾರೆಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಅದೇ ರೀತಿ ನಾಗರತ್ನಮ್ಮಳಿಗೆ ಜಗದೀಶ್ ಎಂಬ ಒಬ್ಬನೇ

ಮಗ ಇದ್ದಾನೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಸದರಿ ನಾಗರತ್ನಮ್ಮ ಮತ್ತು ಜಗದೀಶ್ ಈ ಕೇಸಿನಲ್ಲಿ ವಾದಿಯರು ಎಂದರೆ ಸರಿ. 1ನೇ ವಾದಿಯ ಹೆಸರು ನಾಗರತ್ನಮ್ಮ ಎಂದು ಇದ್ದರೂ ಕೂಡ ಉದ್ದೇಶ ಪೂರ್ವಕವಾಗಿ ನಾನು ನಿ.ಡಿ.48 ರಲ್ಲಿ ರತ್ನಮ್ಮ ಎಂದು ಬರೆಸಿದ್ದೇನೆ ಎಂದರೆ ಸಾಕ್ಷಿಯು ವಾದಿಯ ಹೆಸರು ನಾಗರತ್ನಮ್ಮ ವಂಶವೃಕ್ಷ ತಯಾರಿಸುವಾಗ ತಪ್ಪಾಗಿ ರತ್ನಮ್ಮ ಎಂದು ಬರೆದಿದ್ದಾರೆ ಎಂದು ಹೇಳುತ್ತಾರೆ.

ನಿ.ಪಿ.19 ರ ಪ್ರಕಾರ ನಾನು ಮತ್ತು ನನ್ನ ಗಂಡ ಶಾಮಣ್ಣನವರು ಸೇರಿ ರತ್ನಮ್ಮ, ಮುನಿತಾಯಮ್ಮ ಮತ್ತು ನರಸಿಂಹಮೂರ್ತಿ ರವರುಗಳ ಮೇಲೆ ತಹಶೀಲ್ದಾರ್ ರವರ ಮುಂದೆ ಆರ್.ಆರಿ.ಟಿ.ಸಿ.ಆರ್.11/2005-06 ರಲ್ಲಿ ಕೇಸು ಹಾಕಿದ್ದೆವು ಎಂದರೆ ಸರಿ. ರತ್ನಮ್ಮ ಕೋಂ ರಾಮಾಂಜಿನಪ್ಪ ಎಂದರೆ ನಾಗರತ್ನಮ್ಮ ಕೋ ರಾಮಾಂಜಿನಪ್ಪ ಎಂದರೆ ಸರಿ. 2005-06 ರಲ್ಲೇ ಅವರ ಹೆಸರು ನಾಗರತ್ನಮ್ಮ ಎಂದು ಗೊತ್ತಿದ್ದರೂ ಕೂಡ ನಾನು ಸುಳ್ಳು ಹೆಸರನ್ನು ನೀಡಿ ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನಾಗರತ್ನಮ್ಮ ಎಂದು ಹೇಳಿ ಬರೆಸಿದ್ದರೂ ಕೂಡ ಅವರು ತಪ್ಪಾಗಿ ರತ್ನಮ್ಮ ಎಂದು ಬರೆದಿದ್ದಾರೆ ಎಂದು ಹೇಳುತ್ತಾರೆ. ನಾನು ಉದ್ದೇಶಪೂರ್ವಕವಾಗಿ ರತ್ನಮ್ಮ ಎಂದು ಸದರಿ ಕೇಸಿನಲ್ಲಿ ಬರೆಸಿರುವ ಕಾರಣ ನಾಗರತ್ನಮ್ಮ ರವರು ಸದರಿ ಕೇಸಿನಲ್ಲಿ ಹಾಜರಾಗಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಕೇಸಿನಲ್ಲಿ ನಾಗರತ್ನಮ್ಮ ಹಾಜರಾಗಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಕೇಸಿನಲ್ಲಿ ನಾನು ಶಾಮಣ್ಣನವರು ಮೃತಪಟ್ಟಿದ್ದಾರೆಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.